# *ಹರೇ ಶ್ರೀನಿವಾಸಾ*

*:ಶ್ರೀ ಪ್ರಸನ್ನವೇಂಕಟದಾಸರು:*

ಶ್ರೀ ಶಾತ್ಪ್ರಾಪ್ತ ಸುವಿಜ್ಞಾನಂ ಶ್ರೀಶೈಕ ನಿರತಂ ಸದಾ
ಪ್ರಸನ್ನ ವೇಂಕಟಾರ್ಯೋಽಮೇ ಭೂಯಾತ್ ಸರ್ವಾರ್ಥ ಸಿದ್ಧಯೇ




ಪುಣ್ಯದಿನ : ಭಾದ್ರಪದ ಶುದ್ಧ ದ್ವಾದಶಿ
ಹುಟ್ಟಿದ ಊರು : ಬಾಗಲಕೋಟೆ
ಹೆಸರು : ವೆಂಕಪ್ಪಯ್ಯ
ಅಂಕಿತ : ಪ್ರಸನ್ನ ವೆಂಕಟ
ಅಂತ್ಯಕಾಲದ ಊರು : ಬದಾಮಿ
ತಂದೆ ತಾಯಿಗಳು : ಕಾಖಂಡಕಿ ನರಸಪ್ಪಯ್ಯ ಮತ್ತು ಲಕ್ಶ್ಮೀಬಾಯಿ
ಗುರುಗಳು : ಮುದ್ಗಲ್ ಜನಾರ್ಧನಾಚಾರ್ಯರು
ಕೃತಿಗಳು : ದಶಮ ಸ್ಕಂದ ಭಾಗವತ, ಸತ್ಯಭಾಮಾ ವಿಲಾಸ, ಸಮಸ್ತ್ರಮಣಿಗಣ ಶಟಚರಣ ಪದ್ಯಮಾಲಾ,
ಭ್ರಮರ ಗೀತೆ, ಕೀರ್ತನೆಗಳು, ಸುಳಾದಿಗಳು
ಉಗಾಭೋಗಗಳು ಇತ್ಯಾದಿ.

ಇವರು ರಚಿಸಿದ ಕೃತಿಗಳು ಅನೇಕವಾದರೂ ಈಗ ನಮಗೆ *ಈಗ ನಮಗೆ ಲಭ್ಯವಿರುವುದು, ೪೨೮ ಕೀರ್ತನೆಗಳು, ೨೦ ಉಗಭೋಗಗಳು, ೯ ಸುಳಾದಿಗಳು, ೧ ವೃತ್ತನಾಮ ಮತ್ತು ೩ ಕೋಲು ಹಾಡುಗಳು ಮಾತ್ರ.*

ಕನ್ನಡ, ಮರಾಠಿ, ಉರ್ದು ಮುಂತಾದಭಾಷೆಗಳನ್ನು ತಮ್ಮ ಕೃತಿಗಳಲ್ಲಿ ಮೇಳೈಸಿ ಶ್ರೀ ಪ್ರಸನ್ನವೆಂಕಟದಾಸರು ವಿಶಿಷ್ಟವಾದ ಕೊಡುಗೆಯನ್ನಿತ್ತು ಕನ್ನಡ ದಾಸ ಸಾಹಿತ್ಯವನ್ನು ಶ್ರೀಮಂತವಾಗಿಸಿದ್ದಾರೆ. ಅವರು ಕನ್ನಡದಲ್ಲಿ ರಚಿಸಿದ ಭಾಗವತ ವೈಶಿಷ್ಟಪೂರ್ಣವಾಗಿದೆ. ಅವರ ಸುಶ್ರಾವ್ಯ ಕೀರ್ತನೆಗಳು ಮನಸ್ಸಿಗೆ ಅಮೃತಸಿಂಚನವನ್ನುಂಟು ಮಾಡುತ್ತವೆ. ದೇಶ ವಿದೇಶಗಳಲ್ಲಿ ನಡೆಯುತ್ತಿರುವ ಮೆಟ್ಟಿಲೋತ್ಸವ ಸೇವೆ ಅವರ ಬಿಡೆನೋ ನಿನ್ನಂಘ್ರಿ ಶ್ರೀನಿವಾಸಾ ಕೃತಿಯೊಂದಿಗೇನೆ ಸಮಾಪ್ತವಾಗುತ್ತದೆ.

ಅವರ ಕೃತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ದಾಸರಿಗೆ ಅನೇಕ ಬಾರಿ ಶ್ರೀ ಹರಿಯು ದರ್ಶನ ಭಾಗ್ಯವನ್ನು ದಯಪಾಲಿಸಿರುವದು ವೇದ್ಯವಾಗುತ್ತದೆ. ಅವರ "ತಪ್ಪು ನೋಡದೆ ಬಂದೆಯಾ ಎನ್ನಯ ತಂದೆ" ಕೃತಿ ಶ್ರೀ ಹರಿಯ ಪ್ರಥಮ ದರ್ಶನ ಭಾಗ್ಯದ ಫಲವೇ ಎಂದು ತೋರುತ್ತದೆ. ಅವರ ಅಂತ್ಯಕಾಲದಲ್ಲಿ ಶ್ರೀ ಹರಿಯು ಬಾಲಕೃಷ್ಣನಾಗಿ ದರ್ಶನವನ್ನಿತ್ತಾಗ ಮೂಡಿ ಬಂದ ಕೃತಿಯೇ ಅವರ "ದಾರೋ ಚಿನ್ನಾ, ನೀ ದಾರೊ ?"

ಶ್ರೀ ಪ್ರಸನ್ನವೆಂಕಟದಾಸರು ತಿರುಪತಿಯ ಶ್ರೀ ವೆಂಕಟೇಶನಿಂದ ನೇರವಾಗಿ ಅಂಕಿತ ಪಡೆದ ಮಹಾನುಭಾವರು. ಅವರು ಪೂಜಿಸಿದ ಶ್ರೀದೇವಿ ಭೂದೇವಿ ಸಹಿತ ಶ್ರೀವೆಂಕಟೇಶನ ಪ್ರತಿಮೆ, ಗೋಪಾಳಬುಟ್ಟಿ, ತಂಬೂರಿಗಳನ್ನು ಶ್ರೀವೆಂಕಟೇಶನೇ ತನ್ನ ಅರ್ಚಕರಿಗೆ ಸ್ವಪ್ನಾದೇಶಮಾಡಿ ದಾಸರಿಗೆ ದಯಪಾಲಿಸಿದುದಾಗಿ ತಿಳಿದು ಬರುತ್ತದೆ.

ಬಾಗಲಕೋಟೆ ನಗರದ ಮುಳುಗಡೆಗೆ ಪೂರ್ವದಲ್ಲಿ, ಬಾಗಲಕೋಟೆ ಕಿಲ್ಲಾ ಓಣಿಯಲ್ಲಿರುವ ಶ್ರೀ ರಾಘವೇಂದ್ರ ರೋಡ, ವಾರ್ಡ್ ನಂ ೧ ರಲ್ಲಿದ್ದ ಶ್ರೀ ಪ್ರಸನ್ನ ವೆಂಕಟದಾಸರ ವಂಶಸ್ಥರ ಮನೆಯು ಶ್ರೀ ಪ್ರಸನ್ನ ವೆಂಕಟದಾಸರು ಪೂಜಿಸಿದ ವಿಗ್ರಹಗಳು, ಅವರು ಉಪಯೋಗಿಸಿದ ತಾಳ, ತಂಬೂರಿ ಗೋಪಾಳಬುಟ್ಟಿ ಮುಂತಾದವುಗಳನ್ನೊಳಗೊಂಡು, ಬಾಗಲಕೋಟೆ ನವನಗರದ ೩ ನೇ ಸೆಕ್ಟರದಲ್ಲಿರುವ ಶ್ರೀ ಪ್ರಸನ್ನ ಮಾರುತಿ ದೇವಸ್ಥಾನದ ಮುಂಭಾಗದಲ್ಲಿ ಪುನರ್ವಸತಿಗೊಂಡಿರುತ್ತದೆ ಮತ್ತು ಈ ಮೊದಲಿನಂತೆ ನಿತ್ಯವೂ ದೇವರ ನಾಮಸ್ಮರಣೆ, ಭಜನೆಗಳಲ್ಲದೆ ಇತರೆ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಕಾರ್ಯಕ್ರಮಗಳು ನಡೆದುಕೊಂಡು ಬಂದಿರುತ್ತವೆ. ಪ್ರತಿವರುಷವೂ ಅಲ್ಲಿ ಮೂರು ದಿವಸ ಶ್ರೀ ಪ್ರಸನ್ನ ವೆಂಕಟದಾಸರ ಆರಾಧನೆ ಮಾತ್ರವಲ್ಲದೆ, ಇನ್ನೂ ಅನೆಕ ದಾಸರ ಆರಾಧನೆಗಳು ಸಮಯ ಸಮಯಕ್ಕೆ ಅನೂಚಾನವಾಗಿ ಜರಗುತ್ತವೆ. ಈ ರೀತಿಯ ಭಕ್ತಿಯ ಪರಂಪರೆ ದಾಸರ ಬಗ್ಗೆ ಜನತೆಯಲ್ಲಿದ್ದ ಗೌರವದ ದ್ಯೋತಕವಾಗಿದೆ. ದಾಸರ ಮನೆ ಮುಳುಗಡೆಯ ಮುಂಚಿನ ಪರಿಸರ ಕುರಿತು ಕೆಲವು ಫೊಟೊಗಳನ್ನು ಕೆಳಗಿನ ಲಿಂಕಿನಲ್ಲಿ ಲಗತ್ತಿಸಿದೆ.

https://plus.google.com/photos/117480596463884412461/albums/5524105977250471249

ಕರ್ನಾಟಕದ ಹರಿದಾಸರು ಭಕ್ತಿಮಾರ್ಗದಲ್ಲಿ ನಮ್ಮ ರಾಜ್ಯದ ಜನತೆಗೆ ಮತ್ತು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ. ಪರಮಾತ್ಮನಲ್ಲಿ ಅವರು ತೋರಿದ ಭಕ್ತಿ ಕೇವಲ ತಮ್ಮ ಆತ್ಮೋದ್ಧಾರಕ್ಕೆ ಮಾತ್ರ ಸೀಮಿತವಾಗಿರದೆ, ತಮ್ಮ ಪರಿಸರದ ಸಮಸ್ತ ಜನತೆಯ ಉದ್ಧಾರ ಅವರ ಗುರಿಯಾಗಿತ್ತು. ಇವರು ರಚಿಸಿದ ಸಾಹಿತ್ಯ ನಮ್ಮ ಸಮಾಜಕ್ಕೆ ಇಂದಿಗೂ, ಇನ್ನೆಂದೆಂದಿಗೂ ದಾರಿ ದೀಪಗಳಾಗಿವೆ.ಈ ಭರತಖಂಡದ ಇಂಥಹ ಮಹಾ ಚೇತನಗಳಲ್ಲಿ ಬಾಗಲಕೋಟೆಯ ಶ್ರೀ ಪ್ರಸನ್ನ ವೆಂಕಟದಾಸರೂ ಒಬ್ಬರು. ಶ್ರೀ ಪುರಂದರದಾಸರು ಮತ್ತು ಶ್ರೀ ಕನಕದಾಸಾರ್ಯರ ನಂತರ ಶ್ರೀ ವಿಜಯ ದಾಸರ ಸಮಕಾಲೀನರಾಗಿ ಕ್ರಿ.ಶ.೧೬೮೦ರಲ್ಲಿ ಬಾಗಲಕೋಟೆಯಲ್ಲಿಯೇ ಹುಟ್ಟಿ, ಬೆಳೆದು, ಭಕ್ತಿಕರ್ಮ ಸಾಧನೆಗೈದ ಈ ಜೀವ ದಕ್ಷಿಣ ಕಾಶಿಯೆಂದು ಪ್ರಸಿದ್ಧವಾದ ಇನ್ನೊಂದು ಐತಿಹಾಸಿಕ ನಗರ ಬದಾಮಿಯಲ್ಲಿ ಕ್ರಿ.ಶ.೧೭೫೨ರಲ್ಲಿ ಹರಿಪಾದವನ್ನೈದಿದರು. ವಿಶ್ವವ್ಯಾಪ್ತ ತಿರುಪತಿಯ ಅಧಿದೇವತೆ ಶ್ರೀನಿವಾಸನಿಂದ ನೇರವಾಗಿ ಅಂಕಿತವನ್ನು ಪಡೆದುದು ಇವರ ಭಕ್ತಿಯ ಪರಕಾಷ್ಠೆಯ ಪ್ರತೀಕ.

## ದಿನಾಂಕ ೨೪.೦೯.೨೦೧೨.

ಬಾಗಲಕೋಟೆ ನಗರದ ಮುಳುಗಡೆಗೆ ಪೂರ್ವದಲ್ಲಿ, ಬಾಗಲಕೋಟೆ ಕಿಲ್ಲಾ ಓಣಿಯಲ್ಲಿರುವ ಶ್ರೀ ರಾಘವೇಂದ್ರ ರೋಡದಲ್ಲಿದ್ದ ಶ್ರೀ ಪ್ರಸನ್ನ ವೆಂಕಟದಾಸರ ಮನೆಯು ಮುಳುಗಡೆಯಾಗಿದ್ದು ಅಲ್ಲಿಯ ಪರಿಸರ ತುಂಬಾ ಅಸಹನೀಯವಾಗಿತ್ತು. *ಬಾಗಲಕೋಟ ವಿಧಾನಸಭಾ ಕ್ಷೇತ್ರದ ಸನ್ಮಾನ್ಯ ಶಾಸಕರು ಶ್ರೀ ವೀರಣ್ಣ ಚರಂತಿಮಠ, ಈ ಪರಿಸರದ ಪಾವಿತ್ರತೆಯನ್ನು ಕಾಪಾಡಲು ತಕ್ಕ ವ್ಯವಸ್ಥೆ* ಮಾಡಿಸಿ *ಶ್ರೀ ಪ್ರಸನ್ನ ವೆಂಕಟದಾಸರ ಸ್ಮರಣೆಗಾಗಿ ಒಂದು ಕಟ್ಟೆಯನ್ನು ನಿರ್ಮಿಸಿ ದ್ದಾರೆ . ಕನ್ನಡ ದಾಸ ಸಾಹಿತ್ಯದ ಅಭಿಮಾನಿಗಳು, ಚಿಂತಕರು ಮತ್ತು ಶ್ರೀ ಪ್ರಸನ್ನ ವೆಂಕಟದಾಸರ ಸಮಸ್ತ ಭಕ್ತ ವೃಂದದ ಪರವಾಗಿ* ದಿನಾಂಕ ೨೪-೦೯-೨೦೧೨ *ಸಂಜೆ ಸನ್ಮಾನ್ಯ ಶಾಸಕರು ಶ್ರೀ ವೀರಣ್ಣ ಚರಂತಿಮಠ ಇವರಿಗೆ ಒಂದು ಚಿಕ್ಕ ಸನ್ಮಾನ ಸಮರಂಭವನ್ನು* ಬಾಗಲಕೋಟೆ ಕಿಲ್ಲಾ ಓಣಿಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಸನ್ನಿಧಾನದಲ್ಲಿ *ಹಮ್ಮಿಕೊಳ್ಳಲಾಗಿದೆ.*

ಪ್ರತಿ ವರುಷದಂತೆ, ಈ ವರುಷವೂ ಶ್ರೀ ಪ್ರಸನ್ನ ವೆಂಕಟದಾಸರ ಆರಾಧನೆಯು *ಬಾಗಲಕೋಟೆಯಲ್ಲಿ ಪುನರ್ವಸತಿಗೊಂಡ ಅವರ ವಂಶಸ್ಥರ ಮನೆಯ ಎದುರಿನಲ್ಲಿರುವ ಶ್ರೀ ಪ್ರಸನ್ನಾಂಜನೇಯ ಸನ್ನಿಧಿ, ಶ್ರೀ ಪ್ರಸನ್ನವೆಂಕಟ ಮಂಟಪ, ಸೆಕ್ಟರ-೩ ನವನಗರ* ಇದೇ ಭಾದ್ರಪದ ಶುದ್ಧ ದಶಮಿ, ಏಕಾದಶಿ ಮತ್ತು ದ್ವಾದಶಿ (ಸೆಪ್ಟಂಬರ ೨೫,೨೬ ಮತ್ತು ೨೭-೨೦೧೨) ಆಚರಿಸಲಾಗುತ್ತದೆ.

*ಶ್ರೀ ಪ್ರಸನ್ನ ವೆಂಕಟದಾಸರ ಆರಾಧನೆಯ ಕಾರ್ಯಕ್ರಮಗಳ ವಿವರ*

*ಸ್ಥಳ : ಶ್ರೀ ಪ್ರಸನ್ನಾಂಜನೇಯ ಸನ್ನಿಧಿ,*

*ಶ್ರೀ ಪ್ರಸನ್ನವೆಂಕಟ ಮಂಟಪ,*

*ಸೆಕ್ಟರ-೩, ನವನಗರ ಬಾಗಲಕೋಟೆ.*

*ಭಾದ್ರಪದ ಶುದ್ಧ ದಶಮಿ ದಿನಾಂಕ ೨೫.೦೯.೨೦೧೨.*

*ಶ್ರೀ ಪ್ರಸನ್ನಾಂಜನೇಯನಿಗೆ ಪಂಚಾಮೃತ ಅಭಿಷೇಕ,*

*ದೇವರ ಪೂಜೆ, ನೈವೇದ್ಯ, ಹರಿನಾಮ ಸಂಕೀರ್ತನೆ, ತೀರ್ಥ ಪ್ರಸಾದ.*

*ಸಾಯಂಕಾಲ ವಿವಿಧ ಭಜನಾ ಮಂಡಲಿಗಳಿಂದ ಸಂಗೀತ ಸೇವೆ.*

*ಭಾದ್ರಪದ ಶುದ್ಧ ಏಕಾದಶಿ ದಿನಾಂಕ ೨೬.೦೯.೨೦೧೨. ಸಂಜೆ ೦೪.೩೦*

*ಶ್ರೀ ಪ್ರಸನ್ನ ವೆಂಕಟ ಕಲ್ಚರಲ್ ಮತ್ತು ಚಾರಿಟೇಬಲ್ ಟ್ರಸ್ಟ್(ರಿ) ಇವರಿಂದ*

*ಶ್ರೀ ಪ್ರಸನ್ನ ವೆಂಕಟದಾಸರ ಕುರಿತು ಕೆಳಕಂಡ ಗ್ರಂಥಗಳು ಮತ್ತು ಧ್ವನಿ ಸುರುಳಿ ಬಿಡುಗಡೆ.*

*೧)* ಶ್ರೀ ಪ್ರಸನ್ನ ವೆಂಕಟದಾಸಕ ಸಮಗ್ರ ಕೃತಿಗಳಲ್ಲಿ ಆಧ್ಯಾತ್ಮಿಕ ಒಳನೋಟ ಸಂಪುಟ-೩

ಶ್ರೀ ಪ್ರಸನ್ನ ವೆಂಕಟದಾಸಕ ಮೇರುಕೃತಿ

*ನಾರಾಯಣ ಪಂಜರ*

*ಲೇಖಕರು : ಪಂಡಿತ ಶ್ರೀ ಶ್ರೀನಿವಾಸ. ಸು. ಮಠದ (ಬಿಜಾಪುರ)*

*ಮತ್ತು*

*೨)* ಶ್ರೀ ಪ್ರಸನ್ನ ವೆಂಕಟದಾಸಕ ಸಮಗ್ರ ಕೃತಿಗಳಲ್ಲಿ ಆಧ್ಯಾತ್ಮಿಕ ಒಳನೋಟ ಸಂಪುಟ-೪

(ಶ್ರೀ ಪ್ರಸನ್ನ ವೆಂಕಟದಾಸಕಕೃತಿಗಳಲ್ಲಿ ಸಿದ್ಧಾಂತದ ಸೊಬಗು ಭಾಗ-೧)

ಶ್ರೀ ಪ್ರಸನ್ನ ವೆಂಕಟದಾಸಕ ಇನ್ನೊಂದು ಮೇರುಕೃತಿ

ಭೇದ ಮುಕ್ತಾವಳಿ

*ಲೇಖಕರು : ಪಂಡಿತ ಡಾ।ಆರ್.ಜಿ.ಗುಡಿ* (ಅಥಣಿ)

*ಗ್ರಂಥಗಳ ಬಿಡುಗಡೆ*

*ಮ।ಶಾ।ಸಂ। ಶ್ರೀ ರಘೂತ್ತಮಾಚಾರ್ಯ ನಾಗಸಂಪಿಗೆ (ಬಾಗಲಕೋಟೆ)ಇವರಿಂದ.*

೩)ಶ್ರೀ ಪ್ರಸನ್ನ ವೆಂಕಟದಾಸರ ಸಮಗ್ರ ಕೃತಿಗಳು ಭಾಗ-೧

ಶ್ರೀ ಪ್ರಸನ್ನ ವೆಂಕಟದಾಸರ ಅಪ್ರಕಟಿತ ಕೃತಿಗಳು (ತಾಳೆಗರಿ ಹಸ್ತ ಪ್ರತಿ ಸಹಿತ )

ಸಂಗ್ರಹ-ಸಂಶೊಧನೆ-ಸಂಪಾದನೆ : ಶ್ರೀ ಲಕ್ಷ್ಮೀಕಾಂತ ಪಾಟೀಲ, ವಕೀಲರು *(ಬಿಜಾಪುರ)*

*ಮತ್ತು*

*೪)* ಶ್ರೀ ಪ್ರಸನ್ನ ವೆಂಕಟದಾಸರ ಆಯ್ದ ಕೃತಿಗಳ ಮರಾಠಿ ಭಾವನುವಾದ

**श्री प्रसन्न वेंकटदासांचे निवडलेले कीर्तन**

ಅನುವಾದ : ಶ್ರೀ ಗುಂಡೋಪಂತ. ಕೆ. ಸಂಗೋರಾಮ (ಬೆಂಗಳೂರು)

*ಗ್ರಂಥಗಳ ಬಿಡುಗಡೆ*

*ಮ।ಶಾ।ಸಂ। ಪಂಡಿತ ಶ್ರೀ ಶ್ರೀನಿವಾಸ. ಸು. ಮಠದ (ಬಿಜಾಪುರ) ಇವರಿಂದ.*

ಶ್ರೀ ಪ್ರಸನ್ನ ವೆಂಕಟದಾಸರ *ನಾರಾಯಣ ಪಂಜರ ಮತ್ತು* ಭೇದ ಮುಕ್ತಾವಳಿಗಳನ್ನೊಳಗೊಂಡ

ಶ್ರೀ ಪ್ರಸನ್ನ ವೆಂಕಟ ನಮನ ಭಾಗ-೨

*ನಿರೂಪಣೆ : ವಿದ್ಯಾ ವಾಚಸ್ಪತಿ ಶ್ರೀ ಅರಳುಮಲ್ಲಿಗೆ ಪಾರ್ಥಸಾರಥಿ ,*

*ಗಾಯನ : ಬಾಗಲಕೋಟೆಯ ಹೆಮ್ಮೆಯ ಸಂಗೀತ ಕಲಾವಿದ ಶ್ರೀ ಅನಂತ ಕುಲಕರ್ಣಿಯವರ*

*ಧ್ವನಿ ಸುರುಳಿ ಬಿಡುಗಡೆ*

*ಬಾಗಲಕೋಟ ವಿಧಾನಸಭಾ ಕ್ಷೇತ್ರದ ಜನಪ್ರೀಯ ಸನ್ಮಾನ್ಯ ಶಾಸಕರು*

*ಶ್ರೀ ವೀರಣ್ಣ ಚರಂತಿಮಠ ಇವರಿಂದ.*

ವಂದನಾರ್ಪಣೆಯೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮ ಮುಕ್ತಾಯ

*ಏಕಾದಶಿ ನಿಮಿತ್ತ ದಿನಾಂಕ ೨೬.೦೯.೨೦೧೨. ರಾತ್ರಿ ಜಾಗರಣೆ, ಹರಿನಾಮ ಸಂಕೀರ್ತನೆ, ಭಜನಾ ಮಂಡಲಿಗಳಿಂದ ಸಂಗೀತ ಸೇವೆ.*

*ದ್ವಾದಶಿ ದಿನಾಂಕ ೨೭.೦೯.೨೦೧೨ ಬೆಳಗಿನ ಜಾವದಲ್ಲಿ ಹರಿವಾಣ ಸೇವೆ ತದನಂತರದಲ್ಲಿ ದೇವರ ಪೂಜೆ, ನೈವೇದ್ಯ, ತೀರ್ಥ ಪ್ರಸಾದ.*

*ವಾದಿರಾಜ ಕುಲಕರ್ಣಿ*

*ಶ್ರೀ ಪ್ರಸನ್ನ ವೆಂಕಟದಾಸರ ಆರಾಧನ ಮಹೋತ್ಸವ ಸಮಿತಿ*

*ಮತ್ತು ಶ್ರೀ ಪ್ರಸನ್ನ ವೆಂಕಟ ಕಲ್ಚರಲ್ ಮತ್ತು ಚಾರಿಟೇಬಲ್ ಟ್ರಸ್ಟ್(ರಿ) ಪರವಾಗಿ.*